ಆ) ಖಾಲಿ ಇರುವ ಉಪನ್ಯಾಸಕರ ಹುದ್ದೆಗಳು – ೨ ಖಾಲಿ ಇರುವ ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ ಉಪನ್ಯಾಸಕರ ಹುದ್ದೆಗಳನ್ನು ಆದಷ್ಟು ಜಾಗ್ರತೆಯಾಗಿ ತುಂಬಲಾಗುವುದು.

ಶಿಕಾರಿಪುರ ತಾಲ್ಲೂಕು ಹರಿಜನವಾಡಾ ರಸ್ತೆ ಬಗ್ಗೆ

೧೦೬೭. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಸರಕಾರದಿಂದ ಹಣ ಮಂಜೂರಾಗಿ ಕೆಲಸ ಮುಂಗಿಯದೆ ಇರುವ ಹರಿಜನವಾಡಾ ರಸ್ತೆಗಳ ಸಂಖ್ಯೆ ಎಷ್ಟು ?

ಆ) ಜಲ್ಲಿ ಬಡಾವಣೆ ಕೆಲಸ ಮುಗಿದಿದ್ದರೂ ಈವರೆಗೆ ಡಾಂಬರ್ ಹಾಕಿ ಮಾಡದಿರಲು ಕಾರಣ ವೇನು ?

ಇ) ಮೇ ತಿಂಗಳ ಒಳಗಾಗಿ ಡಾಂಬರ್ ಹಾಕಿ ರಸ್ತೆ ಮಾಡಿ ಮುಗಿಸಲು ಮಂತ್ರಿ ಇತರೆ ವ್ಯವಸ್ಥೆ ಯನ್ನು ಮಾಡಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ವಿಶೇಷ ಘಟಕ ಯೋಜನೆಯಲ್ಲಿ ಆರು ಕೆಲಸಗಳು ಪ್ರಗತಿಯಲ್ಲಿವೆ.

ಆ) ಮತ್ತು ಇ) ಮೇಲ್ಕಂಡ ೬ ಕೆಲಸಗಳ ಪೈಕಿ, ೪ರು ಮಾಡುವ ಕೆಲಸಗಳು ೩ ಮಾತ್ರ ಇರುತ್ತವೆ. ಆರ್ಥಿಕ ಲಭ್ಯತೆಗನುಗುಣವಾಗಿ, ಡಾಂಬರಂ ಹಾಕುವ ಕೆಲಸವನ್ನು ಆದಷ್ಟು ಬೇಗ ಮಾಡುವಂತೆ ವ್ಯವಸ್ಥೆ ಮಾಡಲಾಗುವುದು.

ಹಾನಗಲ್ಲಂ ತಾಲ್ಲೂಕಿನಲ್ಲಿರುವ ಸರಕಾರಿ ಪೂಾಧ್ಯಮಿಂಕ ಶಾಲೆಗಳ ಕುರಿತು

೧೧೭೬. ಶ್ರೀ ಉದಾಸಿ (ಹಾನಗಲ್).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾನಗಲ್ ತಾಲ್ಲೂಕಿನಲ್ಲಿ ಒಟ್ಟು ಇರುವ ಸರ್ಕಾರಿ ಪೂಾಧ್ಯಮಂ ಶಾಲೆಗಳೆಷ್ಟು ?

ಆ) ಪೂಾಧ್ಯಮಿಂಕ ಶಾಲೆಗಳಿಗೆ ಇರಬೇಕಾದ ಪ್ರತಿಯೊಂದು ವಿಷಯಕ್ಕನುಗುಣವಾಗಿ ಶಿಕ್ಷಕರಂ ಇರುವರೇ ?

ಶ್ರೀ ಡಿ. ಮಂಂಜುನಾಥ್ (ಶಿಕ್ಷಣ ಸಚಿವರು).—

ಅ) ೬ ... ಸರ್ಕಾರಿ ಪ್ರೌಢಶಾಲೆಗಳಿವೆ.
೧ ... ಕಿರಿಯ ಕಾಲೇಜಂ ಇರುತ್ತದೆ.

ಆ) ಹೌದು. ಹೆಚ್ಚು ಕಮ್ಮಿ ಎಲ್ಲಾ ಶಾಲೆಗಳಲ್ಲಿ ಎಲ್ಲಾ ವಿಷಯಕ್ಕೂ ಶಿಕ್ಷಕರು ಇದ್ದಾರೆ.

ಹೆಗ್ಗಡದೇವನ ಕೋಟೆಯಿಂದ ನಾಗನಪಳ್ಳಿಯಂ ಮಾರ್ಗಕ್ಕೆ ರಸ್ತೆ ಡಾಂಬರ ಹಾಕುವ ಬಗ್ಗೆ

೧೨೭೦. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೆಗ್ಗಡದೇವನ ಕೋಟೆಯಿಂದ ನಾಗನಹಳ್ಳಿ ಮಾರ್ಗ ತಾರಕ ಅಣೆಕಟ್ಟೆಯವರೆಗೆ ಇರುವ ರಸ್ತೆಯು ಕಬಿನಿ ನೀರಾವರಿ ವೃತ್ತಕ್ಕೆ ಸೇರಿದೆಯೆ ?

ಅ) ೧೯೮೫ ರಲ್ಲಿ ಈ ರಸ್ತೆಗೆ ಡಾಂಬರು ಹಾಕಿಸಲು ಮಂಜೂರು ಮಾಡಲಾಗಿದ್ದು ನಿಜವೇ ?

ಇ) ಹಾಗಿದ್ದಲ್ಲಿ ಸದರಿ ರಸ್ತೆಗೆ ಈವರೆವಿಗೂ ಡಾಂಬರು ಹಾಕದಿರಲು ಕಾರಣವೇನು ? ಹಾಗೂ ಡಾಂಬರನ್ನು ಯಾವಾಗ ಹಾಕಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು

ಆ) ಇಲ್ಲ.

ಇ) ತಾರಕ ಯೋಜನೆಗೆ ಈವರವಿಗೂ ಮಂಜೂರಾದ ಅನುದಾನವು ನೀರಾವರಿ ಸಾಮರ್ಥ್ಯವನ್ನು ಸೃಷ್ಟಿಸುವ ಕೆಲಸಗಳನ್ನು ತೆಗೆದುಕೊಳ್ಳಲು ಮಾತ್ರ ಸಾಕಾಗುತ್ತಿದ್ದರಿಂದ, ಮೇಲ್ಕಂಡ ಕೆಲಸವನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಮುಂದೆ ಲಭ್ಯವಾಗುವ ಅನುದಾನವನ್ನು ಅನುಸರಿಸಿ ಸಾಧ್ಯವಾದಲ್ಲಿ ಈ ಕೆಲಸವನ್ನು ತೆಗೆದುಕೊಳ್ಳಲು ಯೋಜಿಸಲಾಗುವುದು.

ಸದರಿ ವಿಭಾಗ ಮತ್ತು ಉಪವಿಭಾಗಗಳ ಕೆಲಸದ ಬಗ್ಗೆ

೧೩೦೮. ಶ್ರೀ ಆರ್. ವೆಂಕಟರಾವಪಯ್ಯ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಲೋಕೋಪಯೋಗಿ ಇಲಾಖೆಯ ಸಂಪರ್ಕ ಮತ್ತು ಕಟ್ಟಡಗಳು ಹಾಗೂ ಸಣ್ಣ ನೀರಾವರಿ ವಲಯಗಳ ಎಷ್ಟು ವಿಭಾಗ ಹಾಗೂ ಉಪವಿಭಾಗಗಳನ್ನು ಜಿಲ್ಲಾ ಪರಿಷತ್ತಿನಲ್ಲಿ ವಿಲೀನಗೊಳಿಸಲಾಗುವುದು (ವಿವರಗಳನ್ನು ದಯವಿಟ್ಟು ಒದಗಿಸಬೇಕು)?

ಆ) ಸದರಿ ವಿಭಾಗ ಮತ್ತು ಉಪವಿಭಾಗಗಳ ಕೆಲಸಗಳು ಸುಗಮವಾಗಿ ಸಾಗಲು ಇವುಗಳನ್ನು ಸಧ್ಯದಲ್ಲಿ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯಲ್ಲಿ ಮುಂದುವರೆಸುವುದು ಉಚಿತವಲ್ಲವೇ?

ಶ್ರೀಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಲೋಕೋಪಯೋಗಿ ಮತ್ತು ನಿರಾವರಿ ಇಲಾಖೆಯಿಂದ ಸಂಪರ್ಕ ಮತ್ತು ಕಟ್ಟಡಗಳು ವಲಯದ ೧೫ (ಹದಿನೈದು) ವಿಭಾಗಗಳು ಮತ್ತು ೬೯ (ಎಂಬತ್ತೊಂಬತ್ತು) ಉಪವಿಭಾಗಗಳನ್ನು ಹಾಗೂ ಸಣ್ಣ ನೀರಾವರಿ ವಲಯದ ೫ (ಐದು) ವಿಭಾಗಗಳು ಮತ್ತು ೨೭(ಇಪ್ಪತ್ತೇಳು) ಉಪವಿಭಾಗಗಳನ್ನು ಜಿಲ್ಲಾ ಪರಿಷತ್ತುಗಳಿಗೆ ಪರ್ಗಾವಣೆ ಮಾಡುವ ಪ್ರಸ್ತಾಪನೆಯು ಸರ್ಕಾರದ ಪರಿಶೀಲನೆಯಲ್ಲಿ ಇರುವುದು.

ಆ) ಅಧಿಕಾರ ವಿಕೇಂದ್ರೀಕರಣಗೊಳಿಸಲು ಜಿಲ್ಲಾ ಪರಿಷತ್ತುಗಳಿಗೆ ಸದರಿ ವಿಭಾಗ ಹಾಗೂ ಉಪವಿಭಾಗಗಳನ್ನು ವಹಿಸಿಕೊಡಲಾಗುತ್ತಿದೆ. ಹೀಗೆ ಮಾಡುವುದರಿಂದ ಸದರಿ ವಿಭಾಗ ಮತ್ತು ಉಪವಿಭಾಗಗಳ ಕೆಲಸ ಕಾರ್ಯಗಳು ಈಗ ಇರುವುದಕ್ಕಿಂತ ಸುಗಮ ಹಾಗೂ ತ್ವರಿತವಾಗಿ ನಡೆಯುತ್ತವೆ ಎಂದು ನಿರೀಕ್ಷಣೆ.

ಕರ್ನಾಟಕ ವಿಧಾನ ಪರಿಷತ್ತಿನ ಗ್ರಂಥಾಲಯ
KARNATAKA LEGISLATIVE COUNCIL LIBRARY
READING ROOM
ವಾಚನಾಲಯ
ದಿನಾಂಕ.....